ಸರಬರಾಜನ್ನು ಹೆಚ್ಚುವರಿಗೊಳಿಸಲು ಸುಮಾರು 37.80ಲಕ್ಷ ರೂಪಾಯಿಗಳ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿದೆ.

ಶ್ರೀ ಎಂ.ಕೆ. ಪಟ್ಟಣ್ಣಶೆಟ್ಟಿ:– ಮಾನ್ಯ ಅಧ್ಯಕ್ಷರೆ, ಕೆರೂರು ಸುಮಾರು 16–18ಸಾವಿರ ಜನಸಂಖ್ಯೆಯುಳ್ಳ ನಗರಸಭೆ. ಈಗಾಗಲೇ ಅಲ್ಲಿ ನಾಲ್ಕೈದು ದಿನಗಳಿಗೊಮ್ಮೆ ನೀರು ಪೂರೈಸುತ್ತಿದ್ದಾರೆ. ಮುಖ್ಯವಾಗಿ ಅವರು ಹೇಳಿದಂತಹ ಉತ್ತರವನ್ನು ನೋಡಿದರೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ. ಇದ್ದ ಕೊಳವೆ ಬಾವಿಗಳು ವಿಫಲವಾಗಿ ಅಲ್ಲಿ ನೀರಿನ ತೊಂದರೆಯಿದೆ. ಈ ಕಾರಣ ಅಲ್ಲಿ ಮಾನ್ಯ ಸಚಿವರು ಇನ್ನೂ ಹೆಚ್ಚಿನ ಕೊಳವೆ ಬಾವಿಗಳನ್ನು ಕೊರೆಸಬೇಕು. ಅದರಂತೆ ನೀವು 37ಲಕ್ಷದ 80ಸಾವಿರ ರೂಪಾಯಿ ಏನೊಂದು ಯೋಜನೆಯನ್ನು ತೆಗೆದುಕೊಂಡಿದ್ದಾರೆ ಅದನ್ನು ಯಾವಾಗ ಕೈಗೊಳ್ಳುತ್ತೀರಿ ? ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಕೆರೂರು ನಗರದಿಂದ ಸುಮಾರು 15ಕಿಲೋಮೀಟರ್ ದೂರದಲ್ಲಿ ಹರಿಯತಕ್ಕ ಮಲಪ್ರಭಾ ನದಿಗೆ ಒಂದು ಖಾಯಂ ಅದ ನೀರು ಸರಬರಾಜು ಮಾಡುವ ಯೋಜನೆಯನ್ನು ಕೈಗೆ ಎತ್ತಿಕೊಳ್ಳುತ್ತೀರಾ ? ಈ ದಿಸೆಯಲ್ಲಿ ತಾವು ಉತ್ತರ ಕೊಡುತ್ತೀರಿ ಎಂದು ನಾನು ಆಸೆ ಇಟ್ಟುಕೊಂಡಿದ್ದೇನೆ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೆ, 1972ರಲ್ಲಿ ಎನ್‌ಆರ್‌ಇಡಬ್ಲ್ಯೂ ಸ್ಕೀಮ್‌ನಲ್ಲಿ ಇದು ಸ್ಟಾರ್ಟ್ ಆಗಿತ್ತು. ಅದರಲ್ಲಿ 2 ಓಪನ್‌ವೆಲ್ಸ್, 16 ಬೋರ್‌ವೆಲ್ ತೋಡಿಸಿ ಇದರಿಂದ ನೀರನ್ನು ಪಂಪ್ ಮಾಡಲಾಗುತ್ತಿತ್ತು. ಆಮೇಲೆ 16 ಬೋರ್‌ವೆಲ್‌ಗಳಲ್ಲಿ 11ಕ್ಕೆ ಪಂಪ್‌ಗಳನ್ನು ಫಿಕ್ಸ್ ಮಾಡಿದ್ದೇವೆ. ಅಲ್ಲಿಂದ ನೀರು ಬರುತ್ತಿದೆ. ಈಗ ಏನಾಗಿದೆ ಎಂದರೆ, ಊರು ಬೆಳೆದು ನೀರಿಗೆ ತೊಂದರೆಯಾಗುತ್ತಿದೆ; ಮಾನ್ಯ ಸದಸ್ಯರು ಹೇಳಿದ್ದು ನಿಜ. ಅದಕ್ಕೋಸ್ಕರ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಹೊಸ ಸ್ಕೀಮ್‌ನ್ನು ತಯಾರು ಮಾಡಿದ್ದೇವೆ. 37.8ಲಕ್ಷ ರೂಪಾಯಿಗಳ ಸ್ಕೀಮ್‌ನ್ನು ಮುಂದಿನ ಬೋರ್ಡ್ ಮೀಟಿಂಗ್‌ನಲ್ಲಿ ಇಟ್ಟು, ಅದನ್ನು ಅಪ್ರೂವ್ ಮಾಡಿಸಿ ಬೇಗನೆ ಅದನ್ನು ಕಾರ್ಯರೂಪಕ್ಕೆ ತರುತ್ತೇನೆ.

ಶ್ರೀ ಎಂ.ಕೆ. ಪಟ್ಟಣಶೆಟ್ಟಿ:– 37.8 ಲಕ್ಷ ರೂಪಾಯಿಗಳ ಯೋಜನೆ ಕೂಡ ತಾತ್ಕಾಲಿಕ ವ್ಯವಸ್ಥೆಯಾಗುತ್ತದೆ. ಖಾಯಂ ಆಗಿ ನೀರು ಬರತಕ್ಕಂಥ ಯೋಜನೆ, ಮಲಪ್ರಭಾ ವಿಚಾರ ಏನು ಮಾಡಿದ್ದೀರಿ ?

ಶ್ರೀ ಚೌಡರೆಡ್ಡಿ:– ಮಲಪ್ರಭಾ ವಿಚಾರದಲ್ಲಿ ನನ್ನಲ್ಲಿ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ನನ್ನ ಹತ್ತಿರ ಮಾತನಾಡಲಿ. ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳೋಣ. ಖಾಯಂ ಆಗಿ ಪರಿಹಾರ ಮಾಡಿದರೆ ಒಳ್ಳೆಯದೆಂದು ನಾನು ಕೂಡ ಒಪ್ಪುತ್ತೇನೆ.

ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ ಕುಡಿಯುವ ನೀರಿನ ಅಭಾವ ಕುರಿತು

2059: ಶ್ರೀ ಎಸ್. ರಮೇಶ್ (ಉತ್ತರಹಳ್ಳಿ):– ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೆಂಗೇರಿ ಸ್ಯಾಟಲೈಟ್ ಟೌನ್‌ನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಾಗೂ ಗೃಹ ಮಂಡಳಿಯವರ ಲೇಔಟ್‌ಗಳು ಇರುವುದು ನಿಜವೇ;

ಆ. ಈ ಲೇಔಟ್‌ನಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಅಭಾವವಿರುವುದು ನಿಜವಲ್ಲವೇ;

ಇ. ಹಾಗಿದ್ದಲ್ಲಿ ಸದರಿ ಲೇಔಟ್‌ಗೆ ಕಾವೇರಿ ನೀರನ್ನು ಸರಬರಾಜು ಮಾಡುವ ಬಗ್ಗೆ ಸರ್ಕಾರದವರು ಕ್ರಮವೇನನ್ನಾದರೂ ಕೈಗೊಂಡಿರುವರೇ;

ಈ. ಇಲ್ಲದಿದ್ದಲ್ಲಿ ಕೂಡಲೇ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಚೌಡರೆಡ್ಡಿ (ನಗರಾಭಾವೃದ್ಧಿ ಮಂತ್ರಿಗಳು):-

ಅ. ಇರುವುದು ನಿಜ.

ಆ. ಈ ಉಪನಗರದಲ್ಲಿರುವ ಸಾರ್ವಜನಿಕರಿಗೆ ನೀರನ್ನು ದಿನ ಬಿಟ್ಟು ದಿನ ಒದಗಿಸಲಾಗುತ್ತಿದೆ.

ಇ. ಕಾವೇರಿ ನೀರು ಸರಬರಾಜು ಮಾಡಲು ಕ್ರಮ ಕೈಗೊಂಡಿದ್ದು ಈಗಾಗಲೆ ಬೆಂಗಳೂರು ಜಲಮಂಡಳಿಯವರಿಂದ ರೈಸಿಂಗ್ ಮೆಯಿನ್ ಸಲುವಾಗಿ 277 ಲಕ್ಷ ರೂ.ಗಳ ಅಂದಾಜು ಪಟ್ಟಿ ಬಂದಿದ್ದು ಅದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 119 ಲಕ್ಷ ರೂ.ಗಳನ್ನು ಮತ್ತು ಕರ್ನಾಟಕ ಗೃಹ ಮಂಡಳಿಯು 158 ಲಕ್ಷ ರೂ.ಗಳನ್ನು ಕಟ್ಟಬೇಕಾಗಿದ್ದು ಬಿಡಿಎ ವತಿಯಿಂದ ತುಂಬ ಬೇಕಾದ ಹಣವನ್ನು ತುಂಬಲು ಕ್ರಮ ಕೈಗೊಳ್ಳುತ್ತಿದೆ.

ಈ. ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್. ರಮೇಶ್:- ಮಾನ್ಯ ಅಧ್ಯಕ್ಷರೆ, ಕೆಂಗೇರಿ ಸೆಟ್‌ಲೈಟ್ ಟೌನ್‌ನಲ್ಲಿ ಹೌಸಿಂಗ್‌ಬೋರ್ಡ್ ಮತ್ತು ಬಿ.ಡಿ.ಎ. ಎರಡೂ ಸೇರಿ ಒಂದು ಲೇಔಟ್ ಮಾಡಿದ್ದಾರೆ. ಅಲ್ಲಿ ಸುಮಾರು ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಇದೆ. ಹಿಂದೆ ಮುಖ್ಯ ಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಇದ್ದಾಗ ಒಂದು ಸಭೆ ನಡೆಸಿ ಹೌಸಿಂಗ್ ಬೋರ್ಡ್ ಮತ್ತು ಬಿ.ಡಿ.ಎ.ನವರು ಕೂಡಲೇ ಹಣ ಕಟ್ಟಬೇಕೆಂದು ಸೂಚನೆಯನ್ನು ಕೊಟ್ಟಿದ್ದರು. ಶ್ರೀಮಾನ್ ಬಸವಲಿಂಗಪ್ಪನವರು ನಗರಾಭಿವೃದ್ಧಿ ಮಂತ್ರಿಗಳಾಗಿದ್ದಾಗ ಈ ಸಭೆಯಾಗಿ ಸುಮಾರು ವರ್ಷಗಳು ಕಳೆಯುತ್ತಾ ಬಂತು. ಆದರೂ ಕೂಡ ಇನ್ನೂ ಕೂಡ ಹಣ ಕಟ್ಟಿಲ್ಲ. ಮತ್ತು ಜನರ ನೀರಿನ ಬವಣೆಯೂ ನೀಗಿಲ್ಲ. ಸುಮಾರು ವರ್ಷಗಳಿಂದ ಈ ತೊಂದರೆ ಇದೆ. ವರ್ಷದಲ್ಲಿ ಸುಮಾರು ಒಂಭತ್ತು ತಿಂಗಳು ನೀರಿನ ಕೊಡ ಹಿಡಿದುಕೊಂಡು ಹೆಂಗಸರು ಆಚೆ ಹೋಗುತ್ತಾರೆ. ಇದು ನಾವು ಮಾಡಿರುವ ಲೇಔಟ್. ಇದಕ್ಕೆ ಕೂಡಲೇ ಪರಿಹಾರ ಕ್ರಮ. ತೆಗೆದುಕೊಳ್ಳಬೇಕು. ಅವರಿಂದ ಹಣ ಕಟ್ಟಿಸುತ್ತೀರಾ ? ಯಾವಾಗ ಕಟ್ಟಿಸುತ್ತೀರಿ ? ಹೌಸಿಂಗ್ ಬೋರ್ಡ್ ಮತ್ತು ಬಿ.ಡಿ.ಎ. ಅವರಿಂದ ಯಾವಾಗ ಹಣ ಕಟ್ಟಿಸುತ್ತೀರಿ ? ಈ ಎರಡು ಡಿಪಾರ್ಟಮೆಂಟ್‌ಗಳ ಮಧ್ಯೆ ಅಲ್ಲಿ ಜನರಿಗೆ ತೊಂದರೆಯಾಗುವುದು ಬೇಡ. ಇದಕ್ಕೆ ಯಾವಾಗ ಪರಿಹಾರ ಕಂಡುಹಿಡಿಯುತ್ತೀರೆಂದು ತಾವು ಹೇಳಬೇಕು.

ಶ್ರೀ ಚೌಡರೆಡ್ಡಿ:- ಮಾನ್ಯ ಅಧ್ಯಕ್ಷರೆ, ಕೆಂಗೇರಿ ಸೆಟಲೈಟ್ ಟೌನ್‌ನಲ್ಲಿ ಎರಡು ಲೇಔಟ್‌ಗಳಿವೆ. ಬಿ.ಡಿ.ಎ. ಲೇಔಟ್ ಮತ್ತು ಕರ್ನಾಟಕ ಹೌಸಿಂಗ್‌ಬೋರ್ಡಿನ ಲೇಔಟ್ ಇನ್ನೊಂದು. ಎರಡಕ್ಕೂ ನೀರನ್ನು ಆಲ್ಟರ್‌ನೇಟಿವ್‌ಡೇಸ್‌ನಲ್ಲಿ ಕೊಡುತ್ತಿದ್ದೇವೆ. ಇವರು ನಮಗೆ ಬೆಂಗಳೂರು ವಾಟರ್ ಅಂಡ್ ಸಿವರೇಜ್ ಬೋರ್ಡ್‌ನವರಿಗೆ ರೆಫರ್ ಮಾಡಿದ್ದರು. ಇದಕ್ಕೆ ಒಂದು ಸ್ಕೀಮ್‌ಅನ್ನು ತಯಾರು ಮಾಡಿ ರೆಡಿ ಮಾಡಿದರೆ ನಾವು ದುಡ್ಡುಕೊಡುತ್ತೇವೆ ಎಂದು, ಅದಕ್ಕೋಸ್ಕರ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. 277 ಲಕ್ಷ ರೂಪಾಯಿ ಅಂದಾಜಿನಲ್ಲಿ ಈ ಯೋಜನೆ ತಯಾರಾಗಿದೆ. ಇದಕ್ಕೆ ಬಿ.ಡಿ.ಎ.ನವರ ವಂತಿಕೆ 119 ಲಕ್ಷ ರೂಪಾಯಿಗಳು ಮತ್ತು ಕರ್ನಾಟಕ ಹೌಸಿಂಗ್ ಬೋರ್ಡ್‌ನವರ ವಂತಿಕೆ 158 ಲಕ್ಷ ರೂಪಾಯಿಗಳು. ಇಷ್ಟು ಅವರು ಕೊಡಬೇಕಾಗುತ್ತದೆ. ಅದನ್ನು ಅವರು ಕೊಟ್ಟರೆ ನಾವು ಬೇಗ ಕ್ರಮ ತೆಗೆದುಕೊಳ್ಳುತ್ತೇವೆಂದು ಅವರಿಗೆ ಅನೇಕ ಕಾಗದಗಳನ್ನು ಬರಿದಿದ್ದೇವೆ. ಮತ್ತೆ ಅವರಿಗೆ ಕಾಗದ ಬರೆದು ಒತ್ತಾಯ ಮಾಡಿ ದುಡ್ಡು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ರಮೇಶ್:– ಅಲ್ಲಿ ಒಂದು ಕೊಡ ನೀರೂ ತುಂಬುತ್ತಿಲ್ಲ, ಅಷ್ಟು ಸಣ್ಣಗೆ ನೀರು ಬರುತ್ತದೆ. ಕುಡಿಯುವ ನೀರಿನ ಬಗ್ಗೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆ ಹೇಳಬೇಕು. ಹೌಸಿಂಗ್‌ಬೋರ್ಡ್ ಮತ್ತು ಬಿ.ಡಿ.ಎ.ನವರಿಂದ ಕೂಡಲೇ ಹಣ ತುಂಬಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಕುಡಿಯುವ ನೀರಿನ ಬವಣೆಗೆ ಏನು ಪರಿಹಾರ ಮಾಡುತ್ತೀರಿ ?

ಶ್ರೀ ಚೌಡರೆಡ್ಡಿ:– ಕುಡಿಯುವ ನೀರಿನ ತೊಂದರೆ ಇಲ್ಲವೆಂದು ನಾನು ಹೇಳುತ್ತಿಲ್ಲ; ಅಲ್ಲಿ ತೊಂದರೆ ಇದೆ. ಅದಕ್ಕೋಸ್ಕರವಾಗಿ ಈಗ ಬೇಸಿಗೆಕಾಲ ಬರುತ್ತಿದೆ. ಬೋರ್‌ವೆಲ್ ಹಾಕಿಸಿ ತುರ್ತು ಕ್ರಮ ತೆಗೆದುಕೊಳ್ಳುತ್ತೇವೆ. ಜೊತೆಗೆ ಬಿ.ಡಿ.ಎ. ಮತ್ತು ಕರ್ನಾಟಕ ಹೌಸಿಂಗ್ ಬೋರ್ಡ್‌ನವರಿಗೆ ಪರ್ಸಿಸ್ಟ್ ಮಾಡಿ ಬೇಗ ದುಡ್ಡು ಕಟ್ಟಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ. ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೆ ನಮ್ಮ ಬೋರ್ಡಿನಿಂದ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿಯವರು ಪಿಟಿಷನ್ ಕಮಿಟಿ ಅಧ್ಯಕ್ಷರಾಗಿದ್ದಾಗ ನಾವು ಅಲ್ಲಿಗೆ ಭೇಟಿ ಕೊಟ್ಟಿದ್ದೆವು. ಬಿ.ಡಿ.ಎ.ನವರು, ಹೌಸಿಂಗ್ ಬೋರ್ಡ್‌ನವರು, ಎಲ್ಲರೂ ಸಹಿತ ತಮಗೆ ತಪ್ಪು ವರದಿಯನ್ನು ಕೊಡುತ್ತಿದ್ದಾರೆ. ಅಲ್ಲಿ ಬಹಳಷ್ಟು ತೊಂದರೆ ಇದೆ. ದಯವಿಟ್ಟು ತಾವು ಅಲ್ಲಿಗೆ ಭೇಟಿಕೊಟ್ಟು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಸೆಷನ್ ಆದಮೇಲೆ ಬೇಕಾದರೆ ಒಂದು ಸಲ ಹೋಗಿಬನ್ನಿ. ಆಗ ನೇರವಾಗಿ ನಿಮ್ಮ ಗಮನಕ್ಕೆ ಬರುತ್ತದೆ. ಅವರೆಲ್ಲ ಬಂದು ನೋಡಿ ನಾವು ಮಾಡಿಕೊಡುತ್ತೇವೆ ಎಂದು ಪಿಟಿಷನ್ ಕಮಿಟಿಗೆ ಹೇಳಿದ್ದರು. ಇದು ನನ್ನ ಪಾರ್ಲಿಮೆಂಟರಿ ಕ್ಷೇತ್ರಕ್ಕೆ ಬರುತ್ತದೆ. ನಾನು ಸಹ ಭೇಟಿಕೊಟ್ಟು ನೋಡಿದ್ದೇನೆ. ಅವರು ಏನೇನೂ ಮಾಡಿಲ್ಲ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಸಿಂಧ್ಯರವರೂ ಬರಲಿ, ನಾವು ಬೇಗ ಅಲ್ಲಿಗೆ ಭೇಟಿ ಕೊಡೋಣ, ಜೊತೆಗೆ ಅವರನ್ನೂ ಕರೆಸುತ್ತೇನೆ. ನೀವೂ, ನಾವೂ ಕುಳಿತುಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ.

ಬೀದಿಭಾಗ್ಯ ಯೋಜನೆ ಕುರಿತು

394: ಶ್ರೀ ಜಿ. ರಾಜುಗೌಡ (ಹನೂರು):– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜೀವಗಾಂಧಿ ಶ್ರಮ ಕಲ್ಯಾಣ ನಿಧಿ ಮತ್ತು ಬೀದಿಭಾಗ್ಯ ಯೋಜನೆಯಿಂದ ಎಷ್ಟು ಜನ ಫಲಾನುಭವಿಗಳು ಯಾವ ಯಾವ ರೀತಿ ಸಹಾಯ ಪಡೆದಿರುತ್ತಾರೆ. (ಜಿಲ್ಲಾವಾರು ಅಂಕಿ–ಅಂಶಗಳನ್ನು ನೀಡುವುದು);

ಆ. ಇದರಿಂದ ಸರ್ಕಾರಕ್ಕೆ ಆಗಿರುವ ವೆಚ್ಚವೆಷ್ಟು;

ಇ. 1992–93ರ ಆಯವ್ಯಯದಲ್ಲಿ ಇದಕ್ಕಾಗಿ ನಿಗದಿಪಡಿಸಿದ ಮೊತ್ತವೆಷ್ಟು ?

ಶ್ರೀ ಬ್ಲೇಸಿಯಸ್.ಎಂ. ಡಿಸೋಜ (ಕಾರ್ಮಿಕ ಸಚಿವರು) ಇವರ ಪರವಾಗಿ ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ಈ ಯೋಜನೆಯ ರೂಪರೇಷೆಗಳನ್ನು ಇನ್ನೂ ರೂಪಿಸಬೇಕಾಗಿರುವ ಕಾರಣ, ಯಾವುದೇ ವೆಚ್ಚ ಮಾಡಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.